ಹಾಡಬೇಕು, ಅದನ್ನು ಯಾವ ತಾರಕದಲ್ಲಿ ಹಾಡಬೇಕು ಎಂಬುದನ್ನು ನೆನಪು, ನಿಖರತೆಗಳ ಮೂಲಕ ನಿರೂಪಿಸುವ ಗುಣ ಅಸಾಧಾರಣವಾಗಿತ್ತು. ಲಯಬದ್ಧವಾಗಿರುತ್ತಿದ್ದ ಅವರ ಹೆಜ್ಜೆಗಳು, ಉಚ್ಛ್ರಾಯ ಸ್ಥಿತಿಯಲ್ಲಿರುತ್ತಿದ್ದ ಹಾಡುಗಳು ಎಂಥವರನ್ನೂ ಮರುಳು ಮಾಡುವಂತಿರುತ್ತಿದ್ದವು. ಯಾವ ಪಾತ್ರವನ್ನಾದರೂ ಲೀಲಾಜಾಲವಾಗಿ ಅಭಿನಯಿಸುತ್ತಿದ್ದ ಪುಟ್ಟಸ್ವಾಮಾಚಾರ್‍ರು ನಾನು ನೋಡಿದ ಬಯಲಾಟದ ಭಾಗವತರಲ್ಲಿ ಅದ್ವಿತೀಯರಾಗಿದ್ದರು. ಇವರ ಕೈಕೆಳಗೆ ಕಲಿತ ಸಾಮಾನ್ಯರೂ ಕೂಡ ಉತ್ತಮ ನಟರಾಗಿ ಮತ್ತು ಹಾಡುಗಾರರಾಗಿ ರೂಪುಗೊಳ್ಳುತ್ತಿದ್ದರು. ಪುಟ್ಟಸ್ವಾಮಾಚಾರ್‍ರು ನಂತರ ನಮ್ಮ ಊರಿನಲ್ಲಿ ಬಯಲಾಟದ ಪರಂಪರೆಯೇ ಕಡಿದುಹೋಯಿತು.

ಈಗ ನಮ್ಮ ಊರಿನಲ್ಲಿ ಬಯಲಾಟದ ಯಾವ ಚಹರೆಗಳೂ ಉಳಿದಿಲ್ಲ. ಅಷ್ಟರಮಟ್ಟಿಗೆ ನಮ್ಮ ಹಳ್ಳಿ ವಿಸ್ಮೃತಿಗೆ ಜಾರಿದೆ. ಊರಿನಲ್ಲಿದ್ದ ಹಳೆಯ ಕಲಾವಿದರೆಲ್ಲಾ ಈಗ ಪೌತಿಯಾಗಿದ್ದಾರೆ. ನೂರಾರು ವರ್ಷಗಳ ಕಾಲ ನಮ್ಮ ಹಳ್ಳಿಗೆ ನೀರುಣಿಸಿದ ಊರಮುಂದಲ ಕಲ್ಲುಬಾವಿಯ ಮುಖ ಗುರುತು ಹಿಡಿಯಲಾಗದಷ್ಟು ಕುರೂಪವಾಗಿದೆ. ನಮ್ಮ ಸ್ಕೂಲಿನ ಮುಂಭಾಗದಲ್ಲಿಯೇ ಬೇರೂರಿ ನಿಂತು ಇಡೀ ಊರಿಗೆ ನೆರಳು ನೀಡಿದ್ದ ಅರಳೀ ಕಟ್ಟೆಯ ತಳಾರವೆ ಕಿತ್ತುಹೋಗಿ, ಊರು ತಲುಪಿರುವ ದುಃಸ್ಥಿತಿಗೆ ಮುನ್ನುಡಿ ಬರೆದಂತಿದೆ. ಊರಿನ ಹಿತ ಕಾಯುತ್ತಿದ್ದ ಹಿರಿಯ ಮನಸ್ಸುಗಳೆಲ್ಲಾ ಮರೆಗೆ ಸಂದಿವೆ. ಹಳೆಯ ಭಜನೆಮನೆಯ ಜಾಗದಲ್ಲಿ ಸಿಮೆಂಟ್ ಕಟ್ಟಡದ ದೇವಾಲಯ ತಲೆಯೆತ್ತಿದೆ. ಹೀಗೆ ಇನ್ನೂ ಏನೇನೋ!... ಹೇಳಲು ಶಬ್ದವೇ ನಾಚುವಂತಹ ಬೆಳವಣಿಗೆಗಳು. ಆಧುನಿಕತೆ ಎನ್ನುವ ಪ್ರವಾಹ ನಮ್ಮ ಊರಿನ ಮೂಗಿನವರೆಗೂ ಬಂದು ತಲುಪಿದೆ. ಊರು ಯಾವಾಗ ಮುಳುಗುವುದೊ ಗೊತ್ತಿಲ್ಲ! ಇದೆಲ್ಲಕ್ಕಿಂತ ಮುಖ್ಯವಾಗಿ, ಆಧುನಿಕತೆ ಎನ್ನುವುದು ನಮ್ಮ ಗ್ರಾಮೀಣ ಸಮಾಜದ ಆಳದಲ್ಲಿದ್ದ ಎಲ್ಲ ಉದಾತ್ತ ಮತ್ತು ಜಾತ್ಯತೀತ ಮೌಲ್ಯಗಳ ಕುರುಹುಗಳನ್ನೂ ಉಳಿಸದೆ ಕಣ್ಣುಕಟ್ಟಿದ ಕುದುರೆಯಂತೆ ನಾಗಾಲೋಟದಿಂದ ಓಡುತ್ತಿದೆ. ನನಗಂತೂ ಇದು ಗ್ರಾಮೀಣ ಸಂಸ್ಕೃತಿಯ ಮೇಲಿನ ದಾಳಿ ಎನ್ನುವುದಕ್ಕಿಂತ; ನಮ್ಮ ಹಳ್ಳಿಗಳ ಸಾಮೂಹಿಕ ಹತ್ಯಾಕಾಂಡದ ಹಾಗೆಯೇ ಕಾಣುತ್ತಿದೆ.

ಹೊರಗೆ ಹೆಚ್ಚು ಸರಳ ಮತ್ತು ಮೃದುವಾಗಿರುತ್ತಿದ್ದ ಭಾಗವತರಾದ ಪುಟ್ಟಸ್ವಾಮಾಚಾರ್‍ರು, ಬಯಲಾಟದ ಕಲಿಕೆಯ ಸಂದರ್ಭದಲ್ಲಿ ಮಾತ್ರ ಕಠೋರವಾಗಿರುತ್ತಿದ್ದರು. ಯಾವ ನಟನಾದರೂ ತಪ್ಪಾಗಿ ಕುಣಿದರೆ ಅಥವಾ ಹಾಡಿದರೆ, ಹಿಂದು ಮುಂದು ನೋಡದೆ ತುಸು ಒರಟಾಗಿ ಬಯ್ಯುತ್ತಿದ್ದರು. ನಮ್ಮೂರಿನ ನಡುವಿದ್ದ ಭಜನೆಮನೆಯೇ ಬಯಲಾಟದ ಪ್ರ್ಯಾಕ್ಟೀಸ್ ಮನೆಯಾಗಿತ್ತು. ರಾತ್ರಿ ಏಳು ಏಳೂವರೆಗೆಲ್ಲಾ ಊಟ ಮುಗಿಸಿಕೊಂಡ ನಮ್ಮೂರಿನ ಹಿರಿಯರು ಮತ್ತು ಚಿಳ್ಳೆಪಿಳ್ಳೆಗಳು ದುಪ್ಪಟಿ ಹೊದ್ದು, ಭಜನೆ ಮನೆಯ ಜಗುಲಿ ಮೇಲೆ ನೆರೆಯುತ್ತಿದ್ದರು.

ನಾನು ಪುಟ್ಟಸ್ವಾಮಾಚಾರ್‍ರು ಮನೆಗೆ ಹೋದಾಗಲೆಲ್ಲ, ಅವರ ಪಡಸಾಲೆಯಲ್ಲಿ ಅಂಚನ್ನು ಬಣ್ಣದ ಬಟ್ಟೆಯಿಂದ ಹೊಲೆದಿರುತ್ತಿದ್ದ ಈಚಲು ಚಾಪೆಯ ಮೇಲೆ ಒಂದು ಮೊಳದುದ್ದದ ಪತ್ರಿಕೆಯೊಂದು ಯಾವಾಗಲೂ ಬಿದ್ದಿರುತ್ತಿತ್ತು. ಅದರ ಹೆಸರು 'ಬೆಳಕು'. ಅಂದಿನ ವಯಸ್ಕರ ಶಿಕ್ಷಣ ಸಮಿತಿಯವರು ಪ್ರಕಟಿಸುತ್ತಿದ್ದ ಪತ್ರಿಕೆ. ನಾನು ಓದಿದ ಮೊದಲ ಪತ್ರಿಕೆ 'ಬೆಳಕು'. ನಮ್ಮ ಊರಿನಾಚೆಗೂ ಒಂದು ಜಗತ್ತು ಇದೆ ಎಂದು ನಮಗೆ ತಿಳಿದಿದ್ದು 'ಬೆಳಕು' ಪತ್ರಿಕೆಯ ಮೂಲಕವೇ. ಪುಟ್ಟಸ್ವಾಮಾಚಾರ್‍ರು ಅದರ ಕಾಯಂ ಓದುಗರಾಗಿದ್ದರು. ಇದರ ಜೊತೆಯಲ್ಲಿ